ರಾಜೀವ್‌ಗಾಂಧಿ ಯುವಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಉಸ್ತುವಾರಿಯಾಗಿ ತಾಲ್ಲೂಕು ಮಟ್ಟದ ಸಮಿತಿಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಆದೇಶದಂತೆ ಸಮಿತಿಗಳನ್ನು ಸಚಿವ ಸಮಿತಿಯ ಶಿಫಾರಸ್ಸಿನಂತೆ ಹಾಗೂ ಯೋಜನೆಯ ವ್ಯಾಪ್ತಿ ಮತ್ತು ನಿಯಮಾವಳಿಗಳನ್ನೂ ಸಹ ರಚಿಸಲಾಗಿದೆ.

5305 (6153) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರು ನಡುವೆ ಹಾಲಿ ನಿರ್ಮಿಸುತ್ತಿರುವ ಜೋಡಿ ರಸ್ತೆಯ ನಿರ್ಮಾಣ ಕಾರ್ಯ ಪ್ರಾರಂಭಿಸಿದ್ದು ಯಾವಾಗ;

ಆ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ್ದ ಅವಧಿಯ ವಿವರ ನೀಡುವುದು; ಅವಧಿಗೆ ಮುನ್ನವೇ ನಿರ್ಮಾಣ ಕಾರ್ಯವನ್ನು ಪೂರ್ಣ ಗೊಳಿಸಲಾಗಿದೆಯೇ;

ಇ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ನಿಗಧಿಪಡಿಸಿದ್ದ ಅವಧಿಯ ವಿವರ ನೀಡುವುದು; ಅವಧಿಗೆ ಮುನ್ನವೇ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆಯೇ;

ಈ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಈಗ ಎಷ್ಟು ಪೂರ್ಣ ಗೊಳಿಸಲಾಗಿದೆ (ಇನ್ನೂ ಬಾಕಿ ಇರುವ ನಿರ್ಮಾಣ ಕಾರ್ಯದ ವಿವಿರ ನೀಡುವುದು);

ಉ) ಈ ರಸ್ತೆ ನಿರ್ಮಾಣ ಕಾರ್ಯವನ್ನು ಇನ್ನೂ ಎಷ್ಟು ಸಮಯದಲ್ಲಿ ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ (ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಬೆಂಗಳೂರು–ಮೈಸೂರು ನಡುವೆ ನಿರ್ಮಿಸುತ್ತಿರುವ ನಾಲ್ಕು ಪಥದ ರಸ್ತೆಯ ನಿರ್ಮಾಣವನ್ನು ಎರಡು ಪ್ಯಾಕೇಜುಗಳಲ್ಲಿ ತೆಗೆದುಕೊಳ್ಳಲಾಗಿದೆ.

1) ಬೆಂಗಳೂರಿನಿಂದ–ಮದ್ದೂರಿನವರೆಗೆ

2) ಮದ್ದೂರಿನಿಂದ–ಮೈಸೂರಿನವರೆಗೆ

ಈ ಎರಡು ಪ್ಯಾಕೇಜಿನ ಕಾಮಗಾರಿಗಳನ್ನು ಮಾರ್ಚ್ 2004ರಲ್ಲಿ ಪ್ರಾರಂಭಿಸಲಾಗಿದೆ.

ಆ) ಬೆಂಗಳೂರಿನಿಂದ–ಮದ್ದೂರಿನವರೆಗಿನ ಪ್ಯಾಕೇಜ್–1 ರ ನಿರ್ಮಾಣ ಕಾರ್ಯವನ್ನು ಮೆ:ಬ್ಯಂದಾವನ ಇನ್‌ಫ್ರಾಸ್ಟ್ರಕ್ಚರ್ಸ್ ಅವರಿಗೆ ಅರ್ಧವಾರ್ಷಿಕ ಮರುಪಾವತಿಯ ಆಧಾರದ ಮೇಲೆ (Annuity Basis) ವಹಿಸಿಕೊಡಲಾಗಿದೆ. ಮದ್ದೂರಿನಿಂದ ಮೈಸೂರಿನವರೆಗಿನ ಪ್ಯಾಕೇಜ್–2 ರ ಕಾಮಗಾರಿಇಯನ್ನು ಮೆ:ಸೋಮಾ ಎಂಟರ್‌ಪ್ರೈಸಸ್ ಇವರಿಗೆ ರೂ.16.20 ಕೋಟಿಗಳ ಗುತ್ತಿಗೆ ಮೊತ್ತದಲ್ಲಿ ವಹಿಸಿಕೊಡಲಾಗಿದೆ.

ಇ) ಈ ಎರಡು ಪ್ಯಾಕೇಜಿನ ಕಾಮಗಾರಿಗಳನ್ನು ಪೂರ್ತಿಗೊಳಿಸಲು ನಿಗಧಿಪಡಿಸಿದ ಗುತ್ತಿಗೆಯ ಅವಧಿಯು ಕಾಮಗಾರಿ ಪ್ರಾರಂಭಿಸಿದ ದಿನದಿಂದ 24 ತಿಂಗಳುಗಳು. ಅವಧಿಗೆ ಮುನ್ನವೇ ಕಾಮಗಾರಿಗಳನ್ನು ಪೂರ್ತಿಗೊಳಿಸಲು ಪ್ರಯತ್ನವನ್ನು ಕೂಡಾ ಮಾಡಲಾಗುತ್ತಿದೆ.

ಈ) ಬೆಂಗಳೂರು–ಮದ್ದೂರು ವರೆಗಿನ ಪ್ಯಾಕೇಜ್–1 ರ ಕಾಮಗಾರಿಯನ್ನು ಶೇ.70 ರಷ್ಟು ಪೂರ್ತಿಗೊಳಿಸಲಾಗಿದ್ದು, ಮದ್ದೂರು–ಮೈಸೂರುವರೆಗಿನ ಪ್ಯಾಕೇಜ್–2 ರ ಕಾಮಗಾರಿಯು ಶೇ.51 ರಷ್ಟು ಪೂರ್ತಿ ಗೊಂಡಿರುತ್ತದೆ.

ಉ) ಈ ಕಾಮಗಾರಿಯನ್ನು ಮಾರ್ಚ್ 2006ರ ಒಳಗೆ ಪೂರ್ತಿ ಗೊಳಿಸ ಬೇಕಾಗಿರುತ್ತದೆ. ಆದರೆ, ನಿಗಧಿತ ಅವಧಿಗಿಂತ ಮುಂಚೆಯೇ ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ.

5306 (6154) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಎಲ್ಲೆಲ್ಲಿ ಉದ್ಯೋಗ ವಿನಿಮಯ ಕೇಂದ್ರಗಳಿವೆ;

ಆ) ಪ್ರತಿ ಉದ್ಯೋಗ ವಿನಿಮಯಕೇಂದ್ರಗಳಲ್ಲಿ ಉದ್ಯೋಗದ ಸಲುವಾಗಿ ನೋಂದಣಿ ಮಾಡಿಕೊಂಡಿರುವ ವ್ಯಕ್ತಿಗಳ ಸಂಖ್ಯೆ ಎಷ್ಟು;

ಇ) ಕಳೆದ ಮೂರು ವರ್ಷಗಳಿಂದೀಚೆಗೆ ಈ ವಿನಿಮಯ ಕೇಂದ್ರಗಳ ಮೂಲಕ ಎಷ್ಟು ಮಂದಿಗೆ ಉದ್ಯೋಗ ದೊರಕಿಸಿಕೊಡಲಾಗಿದೆ. (ವಿವರ ನೀಡುವುದು);

ಈ) ಈ ಉದ್ಯೋಗ ವಿನಿಮಯ ಕೇಂದ್ರಗಳಿಂದ ಇನ್ನೂ ಪರಿಣಾಮಕಾರಿಯಾಗಿ ಉದ್ಯೋಗ ದೊರಕಿಸಿಕೊಡಲು ಇವುಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು)

ಶ್ರೀ ತನ್ವೀರ್ ಸೇಠ್ (ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

ಅ) ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಇ) ವರ್ಷವಾರು ವಿವರ ಈ ಕೆಳಗಿನಂತಿದೆ.

2002–03 4,080

2003–04 2,093

2004–05 1,493

ಒಟ್ಟು **7,666**

ಈ) ಪ್ರಸ್ತುತ 3 ಉದ್ಯೋಗ ವಿನಿಮಯ ಕೇಂದ್ರಗಳನ್ನು ಎಂಪ್ಲಾಯ್‌ಮೆಂಟ್ ಪಾರ್ಕ್‌ಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಈ ಪಾರ್ಕ್‌ಗಳು ವೆಬ್‌ಸೈಟ್ ಮುಖಾಂತರ ಅಭ್ಯರ್ಥಿಗಳಿಗೆ ಮತ್ತು ನಿಯೋಜಕರಿಗೆ ವಿಶೇಷ ಸೇವೆ ನೀಡಲಿದೆ.

ಅನುಬಂಧ–1

ರಾಜ್ಯದಲ್ಲಿರುವ ಉದ್ಯೋಗ ವಿನಿಮಯ ಕೇಂದ್ರಗಳು

ಕ್ರಮ ಸಂಖ್ಯೆ	ಉದ್ಯೋಗ ವಿನಿಮಯ ಕೇಂದ್ರಗಳು.
1	*2*
1.	ಉಪ ಪ್ರಾದೇಶಿಕ ಉದ್ಯೋಗ ವಿನಿಮಯ ಕೇಂದ್ರ, ಬೆಂಗಳೂರು.
2.	ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ (ಸಾಮಾನ್ಯ), ಬೆಂಗಳೂರು.
3.	ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ (ತಾಂತ್ರಿಕ), ಬೆಂಗಳೂರು.